**ದಿನಾಂಕ: 17.06.2015ರ ಬುಧವಾರ ಪೂರ್ವಾಹ್ನ 11.00 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರ ಅಧ್ಯಕ್ಷತೆಯಲ್ಲಿ ಕಛೇರಿ ಸಭಾಂಗಣದಲ್ಲಿ ನಡೆಯುವ ಪ್ರಾಧಿಕಾರದ ಸಾಮಾನ್ಯ ಸಭೆಯ ಹಾಗೂ 2015–16ನೇ ಸಾಲಿನ ಆಯವ್ಯಯ(ಬಡ್ಜೆಟ್) ಮಂಡನಾ ಸಭೆಯ ನಡಾವಳಿ.**

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಶ್ರೀಮತಿ ಸುರಯ್ಯಾ ಅಬ್ರಾರ್, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1 | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 2 | ಮಾನ್ಯ ಶ್ರೀ ಟಿ.ಜಾನ್‌ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 3 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 3 | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ,<br>ಮಡಿಕೇರಿ. |
| 4 | ಅಧ್ಯಕ್ಷರು, ವಿಶೇಷ ಆಹ್ವಾನಿತರು<br>ನಗರಸಭೆ, ಮಡಿಕೇರಿ. | 4 | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 5 | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. |
| 6 | ನಗರ ಯೋಜನಾ ಸದಸ್ಯರು, ಸದಸ್ಯರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 6 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 7 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. | 7 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 8 | ಶ್ರೀ ರಾಜಶೇಖರ್ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | 8 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಮೈಸೂರು. |
| | | 9 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| | | 10 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್, ಸೋಮವಾರಪೇಟೆ ಮತ್ತು ಮಡಿಕೇರಿ ಕ್ಷೇತ್ರದ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳು ಮತ್ತು ವಿಶೇಷ ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ: 12.09.2014ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭಾ ನಡಾವಳಿಯನ್ನು ಓದಲಾಯಿತು. ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರ ಬಗ್ಗೆ ಸರ್ಕಾರದ ನಡಾವಳಿ ಆದೇಶದ ಪತ್ರ, ವಲಯ ನಿಯಮಾವಳಿಗಳು ಹಾಗೂ ಅನುಮೋದನೆಯಾಗಿರುವ ಉದ್ದೇಶಿತ ಭೂ ಉಪಯೋಗದ ನಕ್ಷೆ, ರಸ್ತೆ ಪರಿಚಲನಾ ನಕ್ಷೆ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆಗಳನ್ನು ಸಭೆಯಲ್ಲಿ ಹಾಜರುಪಡಿಸಿ, ಇವುಗಳ ಮಾಹಿತಿಗಳನ್ನು ಆಯುಕ್ತರು ಸಭೆಯಲ್ಲಿ ವಿವರಿಸಿದರು. ಇದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು ಪ್ರತಿಕ್ರಿಯೆ ನೀಡುತ್ತಾ, ಮಹಾಯೋಜನೆಯಲ್ಲಿ ಕೆಲವು ಖಾಸಗಿ ಜಮೀನುಗಳ್ಳು ಭಾಗಶಃ ವಸತಿ ಮತ್ತು ಭಾಗಶಃ ಕೃಷಿ ಉಪಯೋಗಕ್ಕೆಂದು ಕಾಯ್ದಿರಿಸಲಾಗಿದ್ದು, ಈ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಮಾಹಿತಿಯನ್ನು ಬಯಸಿದರು.

ಇದಕ್ಕೆ ಮಾನ್ಯ ಶಾಸಕರಾದ ಅಪ್ಪಚ್ಚುರಂಜನ್‌ರವರು ಕೃಷಿ ಉಪಯೋಗದಲ್ಲಿರುವ ಜಮೀನುಗಳನ್ನು ಅರ್ಜಿದಾರರು ಕೋರುವ ಉದ್ದೇಶಕ್ಕೆ ಭೂ ಉಪಯೋಗ ಬದಲವಣೆ ಮಾಡಲು ಪ್ರಸ್ತಾವನೆಗಳನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ಸೂಚಿಸಿದರು ಹಾಗೂ ವಿವಿಧ ಭೂ ಉಪಯೋಗಗಳಿಗೆ ಭೂ ಪರಿವರ್ತನೆ ಮಾಡಲು ಅರ್ಜಿದಾರರು ಕೋರುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ 5ಸೆಂಟ್‌ಗೆ ಮಿತಿಗೊಳಿಸಿ ಪ್ರಾಧಿಕಾರದ ಆಯುಕ್ತರು ಭೂ ಪರಿವರ್ತನೆಗೆ ಅಭಿಪ್ರಾಯ ನೀಡುವಂತೆಯೂ, 10ಸೆಂಟ್‌ಗೆ ಮಿತಿಗೊಳಿಸಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದು ಅವರ ಅಭಿಪ್ರಾಯದೊಂದಿಗೆ ಕೆ.ಟಿ.ಸಿ.ಪಿ.ಕಾಯ್ದೆ 1961, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಹಾಗೂ ಪ್ರಾಧಿಕಾರದ ವಲಯನಿಯಮಾವಳಿಗಳನ್ವಯ ಸೂಕ್ತ ಕ್ರಮ ಕೈಗೊಳ್ಳಬಹುದೆಂದು 10ಸೆಂಟ್‌ಗಿಂತ ಹೆಚ್ಚಿನ ಜಾಗವನ್ನು ಭೂ ಪರಿವರ್ತನೆಗೆ ಪ್ರಾಧಿಕಾರದ ಅಭಿಪ್ರಾಯವನ್ನು ಕೋರಿದ ಸಂಧರ್ಭದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಮಾನ್ಯ ಶಾಸಕರು ಸೂಚಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ :2**

2014ನೇ ಏಪ್ರಿಲ್ ತಿಂಗಳಿನಿಂದ 2015ನೇ ಮಾರ್ಚ್ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 22,81,775.00 |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 22,44,892.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 41,83,500.00 |
| 4 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 5,146.00 |
| 5 | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ | ರೂ. | 3,57,986.00 |
| 6 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 26,000.00 |
| 7 | ಮಹಾಯೋಜನೆ ಸಿ.ಡಿ. ಮತ್ತು ನಕ್ಷೆ ಪ್ರತಿಗಳಿಗೆ ವಿಧಿಸಿರುವ ಶುಲ್ಕ | ರೂ. | 15,500.00 |
| 8 | ಕೆರೆ ಅಭಿವೃದ್ಧಿ ಶುಲ್ಕ ಇಂಡಿಯನ್ ಬ್ಯಾಂಕಿನಿಂದ ಹೆಚ್.ಡಿ.ಎಫ್.ಸಿ. ಬ್ಯಾಂಕಿಗೆ ವರ್ಗಾವಣೆ | ರೂ. | 31,12,000.00 |
| 9 | ಟಿ.ಡಿ.ಎಸ್ ಪಾವತಿ (ಜೆ.ಪಿ.ಇನ್ಫೋಟೆಕ್) | ರೂ. | 1,630.00 |
| 10 | ಇತರೆ ಮೂಲಗಳಿಂದ ಬಂದಿರುವ ಶುಲ್ಕ | ರೂ. | 2,426.00 |
| | **ಒಟ್ಟು ಜಮೆ** | **ರೂ.** | **1,22,30,855.00** |

<u>**ಖರ್ಚು**</u>

| | | | |
|---|---|---|---|
| 1 | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 33,137.00 |
| 2 | ಸಿಬ್ಬಂದಿ ವೇತನ | ರೂ. | 3,45,150.00 |
| 3 | ಜೆರಾಕ್ಸ್ ಮಿಷನ್‌ಗೆ ಟೋನರ್ ಖರೀದಿ | ರೂ. | 2,366.00 |
| 4 | ವೆಬ್‌ಸೈಟ್ ನವೀಕರಣ ಮತ್ತು ನಿರ್ವಹಣೆ ವೆಚ್ಚ | ರೂ. | 12,500.00 |
| 5 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 6,676.00 |
| 6 | ದೂರವಾಣಿ ವೆಚ್ಚ | ರೂ. | 14,987.00 |
| 7 | ವಾಹನ ಬಾಡಿಗೆ ವೆಚ್ಚ | ರೂ. | 11,000.00 |
| 8 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 16,800.00 |
| 9 | ಸ್ಟೇಷನರಿ ಖರೀದಿ | ರೂ. | 8,420.00 |
| 10 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | ರೂ. | 32,263.00 |
| 11 | ಪತ್ರಿಕೆ ಮತ್ತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಬಾಪ್ತು ವೆಚ್ಚ | ರೂ. | 11,151.00 |
| 12 | ಸಭಾ ಉಪಹಾರ ವೆಚ್ಚ | ರೂ. | 3,050.00 |
| 13 | ರಾಷ್ಟ್ರೀಯ ಹಬ್ಬಕ್ಕೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ವಂತಿಕೆ ಪಾವತಿಸಿರುವುದು | ರೂ | 12,000.00 |
| 14 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 2,930.00 |
| 15 | ಮುದ್ರಣ ವೆಚ್ಚ | ರೂ. | 19,500.00 |
| 16 | ಅಂಚೆ ಚೀಟಿ ಖರೀದಿ ವೆಚ್ಚ | ರೂ. | 3,000.00 |
| 17 | ವಕೀಲರ ಶುಲ್ಕ ಪಾವತಿ | ರೂ. | 5,500.00 |
| 18 | ಟಿ.ಡಿ.ಎಸ್ ಪಾವತಿ | ರೂ. | 6,626.00 |
| 19 | ಕೆರೆ ಅಭಿವೃದ್ಧಿ ಶುಲ್ಕ ಇಂಡಿಯನ್ ಬ್ಯಾಂಕಿನಿಂದ ಹೆಚ್.ಡಿ.ಎಫ್.ಸಿ.ಬ್ಯಾಂಕಿಗೆ ವರ್ಗಾವಣೆ | ರೂ. | 31,12,000.00 |
| 20 | ಕೆ.ಟಿ.ಸಿ.ಪಿ ಕಾಯ್ದೆ ಕಲಂ 18ರಡಿ ಸಂಗ್ರಹಿಸಲಾದ ಶುಲ್ಕದ ಶೇ.5ರ ಭಾಗವನ್ನು ನಗರ ಯೋಜನಾ ಮಂಡಳಿಗೆ ಪಾವತಿ (2008–09ನೇ ಸಾಲಿನಿಂದ 2013–14ನೇ ಸಾಲಿನವರೆಗೆ) | ರೂ. | 1,93,743.00 |
| 21 | ಗದ್ದಿಗೆ ಉದ್ಯಾನವನಕ್ಕೆ ಸಂಬಂಧಿಸಿದ ವೆಚ್ಚ | | |
| | 1. ಗದ್ದಿಗೆ ಉದ್ಯಾನವನ ವಾರ್ಷಿಕ ನಿರ್ವಹಣೆ ವೆಚ್ಚ | ರೂ. | 2,63,891.00 |
| | 2. ಗದ್ದಿಗೆ ಉದ್ಯಾನವನಕ್ಕೆ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಾಬ್ತು ಭಾಗಶಃ ಬಿಲ್ ಮೊಬಗಲಗು ಪಾವತಿ. | ರೂ. | 4,60,723.00 |
| | 3. ಟಿ.ಡಿ.ಎಸ್ ಪಾವತಿ | ರೂ. | 9,803.00 |
| | 4. ಸೇಲ್ಸ್ ಟ್ಯಾಕ್ಸ್ ಪಾವತಿ | ರೂ. | 19,605.00 |
| | 5. ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ | ರೂ. | 7,918.00 |
| 22 | ಇತರೆ | ರೂ. | 60.00 |
| | **ಒಟ್ಟು ವೆಚ್ಚ** | ರೂ. | **46,14,799.00** |

**ಘೋಶ್ವಾರೆ:**

| | | | |
|---|---|---|---|
| 1 | 2014–15ನೇ ಆರಂಭಿಕ ಶಿಲ್ಕು | ರೂ. | 87,51,671.00 |
| 2 | 2014–15ನೇ ಸಾಲಿನ ಜಮೆ | ರೂ. | 1,22,30,855.00 |
| 3 | ಒಟ್ಟು ಜಮೆ | ರೂ. | **2,09,82,526.00** |
| 4 | 2014–15ನೇ ಸಾಲಿನಲ್ಲಿ ಖರ್ಚು | ರೂ. | 46,14,799.00 |
| 5 | 2014–15ನೇ ಸಾಲಿನ ಆಖೈರು ಶಿಲ್ಕು | ರೂ. | **1,63,67,727.00** |
| 6 | ಠೇವಣಿ ಇಟ್ಟಿರುವುದು | ರೂ. | 78,95,614.00 |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–**ಏಪ್ರಿಲ್ 2014ರಿಂದ ಮಾರ್ಚ್ 2015ರವರೆಗಿನ ಒಟ್ಟು ಜಮಾ ರೂ. 1,22,30,855/– ಮತ್ತು ಖರ್ಚು ರೂ. 46,14,799/– ಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3) ವಿಷಯ ಸಂಖ್ಯೆ 3:– 2015–16ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು (ಬಡ್ಜೆಟ್) ಸಭೆಯಲ್ಲಿ ಅಂಗೀಕರಿಸುವ ಬಗ್ಗೆ.**

**ಟಿಪ್ಪಣಿ:–** ಅಂದಾಜು ಆಯವ್ಯಯದ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

**ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ**

**2015–16ನೇ ಸಾಲಿನ ಅಂದಾಜು ಜಮೆಯ ವಿವರ ಆಯವ್ಯಯ (ಬಡ್ಜೆಟ್) ವಿವರ**

| ಕ್ರ. ಸಂ | ಜಮೆಯ ವಿವರ | 2012–13ನೇ ಸಾಲಿನ ಜಮೆ | 2013–14ನೇ ಸಾಲಿನ ಜಮೆ | 2014–15ನೇ ಸಾಲಿನ ಜಮೆ | 2015–16ನೇ ಸಾಲಿನ ನಿರೀಕ್ಷಿತ ಜಮೆ |
|---|---|---|---|---|---|
| 1 | ಪರಿಶೀಲನಾ ಶುಲ್ಕ | 4,34,493.00 | 3,79,491.00 | **22,81,775.00** | **25,00,000.00** |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18 ರಲ್ಲಿ ಸಂಗ್ರಹಿಸಲಾದ ಶುಲ್ಕ | 92,308.00 | 4,14,848.00 | **22,44,892.00** | **25,00,000.00** |
| 3 | ಕೆರೆ ಅಭಿವೃದ್ಧಿ ಶುಲ್ಕ | 4,81,600.00 | 25,81,550.00 | **41,83,500.00** | **50,00,000.00** |
| 4 | ಇಂಡಿಯನ್ ಬ್ಯಾಂಕ್ ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆಯಾಗಿ ಮರು ಜಮೆ | - | - | **31,12,000.00** | - |
| 5 | ಫಲಪ್ರದಗೊಂಡಿರುವ ಠೇವಣಿ ಹಣವನ್ನು ಉಳಿತಾಯ ಖಾತೆಗೆ ಮರು ಜಮೆ | 15,66,361.00 | 14,30,024.00 | **-** | **-** |
| 6 | ಎಲ್ಲಾ ಬ್ಯಾಂಕ್‌ಗಳ ಉಳಿತಾಯ ಖಾತೆಯಲ್ಲಿರುವ ಬಡ್ಡಿ | - | - | **3,57,986.00** | **4,00,000.00** |
| 7 | ಟೆಂಡರ್ ಫಾರಂ ಶುಲ್ಕ+ಟೆಂಡರ್ ಠೇವಣಿ ಶುಲ್ಕ | 8,750.00 | 1,61,000.00 | **-** | **-** |
| 8 | ಮಾಹಿತಿ ಹಕ್ಕು ಅಧಿನಿಯಮ 200ರಡಿ ಪಾವತಿಸಿಕೊಂಡಿರುವ ಶುಲ್ಕ | - | 1,236.00 | **5,146.00** | **10,000.00** |

| | | | | | |
|---|---|---|---|---|---|
| 9 | ಟಿ.ಡಿ.ಎಸ್ ಪಾವತಿಸಿರುವುದು | - | 3,511.00 | **1,630.00** | **2,000.00** |
| 10 | ಮಾಹಾಯೋಜನೆಗೆ ಸಂಬಂಧಿಸಿದಂತೆ ಶುಲ್ಕ (ನಕ್ಷೆ+ಸಿ.ಡಿ. ಶುಲ್ಕ) | 27,392.00 | - | **15,500.00** | **10,000.00** |
| 11 | ಇಂಜಿನಿಯರವರಿಗೆ ಪರವಾನಿಗೆ ನೀಡುವ/ ನವೀಕರಿಸುವ ಶುಲ್ಕ | 10,000.00 | 24,000.00 | **26,000.00** | **30,000.00** |
| 12 | ಇತರೆ ಮೂಲಗಳಿಂದ ಬರುವ ಆದಾಯ | 10,548.00 | 1,658.00 | **2,426.00** | **5,000.00** |
| **ಒಟ್ಟು** | | 74,39,051.00 | 49,97,318.00 | **1,22,30,855.00** | **1,04,57,000.00** |

## 2015–16ನೇ ಸಾಲಿನ ಅಂದಾಜು ಖರ್ಚುಗಳ ವಿವರ

| ಕ್ರ. ಸಂ | ಖರ್ಚುಗಳ ವಿವರ | 2012–13ನೇ ಸಾಲಿನ ಖರ್ಚು | 2013–14ನೇ ಸಾಲಿನ ಖರ್ಚು | 2014–15ನೇ ಸಾಲಿನ ಖರ್ಚು | 2015–16ನೇ ಸಾಲಿನ ನಿರೀಕ್ಷಿತ ಖರ್ಚು |
|---|---|---|---|---|---|
| 1 | ಅಧ್ಯಕ್ಷರ ಗೌರವಧನ, ಇತರೆ ಭತ್ಯೆ | 3,72,204.00 | 87,780.00 | **-** | **4,00,000.00** |
| 2 | ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು (ಪ್ರಭಾರ ಭತ್ಯೆ) | 4,04,929.00 | 2,24,024.00 | **33,137.00** | **4,00,000.00** |
| 3 | ಸಿಬ್ಬಂದಿ ವೇತನ | 2,79,442.00 | 2,95,376.00 | **3,45,150.00** | **6,00,000.00** |
| 4 | ದೂರವಾಣಿ ವೆಚ್ಚ | 21,785.00 | 15,231.00 | **14,987.00** | **25,000.00** |
| 5 | ವಿದ್ಯುಚ್ಛಕ್ತಿ ವೆಚ್ಚ | 8,660.00 | 15,605.00 | **6,676.00** | **10,000.00** |
| 6 | ಪತ್ರಿಕಾ ಪ್ರಕಟಣೆ ವೆಚ್ಚ | 21,901.00 | 31,104.00 | **11,151.00** | **20,000.00** |
| 7 | ದಿನಪತ್ರಿಕೆ ಖರೀದಿ ವೆಚ್ಚ | 4,015.00 | 3,960.00 | **-** | **5,000.00** |
| 8 | ಪ್ರಯಾಣ ಭತ್ಯೆ | 41,427.00 | 16,215.00 | **2,930.00** | **5,000.00** |
| 9 | ಕಾರು ಖರೀದಿ/ಬಾಡಿಗೆ ವೆಚ್ಚ/ಇಂಧನ ವೆಚ್ಚ | 2,71,962.00 | 2,01,586.00 | **11,000.00** | **10,25,000.00** |
| 10 | ಮುದ್ರಣ ವೆಚ್ಚ | 16,000.00 | 17,500.00 | **19,500.00** | **25,000.00** |
| 11 | ವಕೀಲರ ಶುಲ್ಕ ಪಾವತಿ | 2,000.00 | - | **5,500.00** | **50,000.00** |
| 12 | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | 18,287.00 | 21,074.00 | **25,220.00** | **50,000.00** |
| 13 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 32,753.00 | - | **32,263.00** | **50,000.00** |
| 14 | ಕಟ್ಟಡ ದುರಸ್ಥಿ ವೆಚ್ಚ ಮತ್ತು ಪೀಠೋಪಕರಣಗಳ ಖರೀದಿ ವೆಚ್ಚ. | 5,26,665.00 | - | **-** | **50,000.00** |
| 15 | ರಾಷ್ಟ್ರೀಯ ಹಬ್ಬದ ವಂತಿಕೆ ಜಿಲ್ಲಾಧಿಕಾರಿಯವರಿಗೆ ಪಾವತಿ | 5,000.00 | 7,000.00 | **12,000.00** | **20,000.00** |
| 16 | ಠೇವಣಿ ಇಟ್ಟಿದ್ದ ಇ.ಎಂ.ಡಿ.ಹಣ ಮರುಪಾವತಿ | 1,60,000.00 | - | **-** | **1,00,000.00** |

| | | | | | |
|---|---|---|---|---|---|
| 17 | ಸಭಾ ಉಪಹಾರ ವೆಚ್ಚ | 2,000.00 | 1,640.00 | **3,050.00** | **10,000.00** |
| 18 | ಅಂಚೆ ಚೀಟಿ ಖರೀದಿ | 1,000.00 | 2,000.00 | **3,000.00** | **5,000.00** |
| 19 | ಪಿಂಚಣಿ ವಂತಿಕೆ ಪಾವತಿ | - | 12,907.00 | **-** | **-** |
| 20 | ಕೆ.ಟಿ.ಸಿ.ಪಿ ಕಾಯ್ದೆ ಕಲಂ 18ರಲ್ಲಿ ಸಂಗ್ರಹಿಸಲಾದ ಶುಲ್ಕದ ಶೇ.5 ನಗರ ಯೋಜನಾ ಮಂಡಳಿಗೆ ಪಾವತಿ | - | - | **1,93,743.00** | **1,25,000.00** |
| 21 | ಮಾಸ್ಟರ್ ಪ್ಲ್ಯಾನ್ ತಯಾರಿಸಲು ಹೊರ ಗುತ್ತಿಗೆ ನೀಡಿರುವ ಬಾಬ್ತು ಆಗುವ ವೆಚ್ಚ | 1,74,600.00 | 3,60,000.00 | **-** | **-** |
| 22 | ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕಣೆಗಳು, ಜೆರಾಕ್ಸ್ ಮಿಷನ್, ಯು.ಪಿ.ಎಸ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮಿಷಿನ್ ಖರೀದಿ ವೆಚ್ಚ/ ವೆಬ್ ಸೈಟ್ ನವೀಕರಣ ಮತ್ತು ನಿರ್ವಹಣೆ | 28,634.00 | 99,147.00 | **14,866.00** | **30,000.00** |
| 23 | ಟಿ.ಡಿ.ಎಸ್. ಪಾವತಿ (ಗದ್ದಿಗೆ + ಇತರೆ) | 38,159.00 | 56,121.00 | **16,429.00** | **50,000.00** |
| 24 | ಸೇಲ್ಸ್ ಟ್ಯಾಕ್ಸ್ ಪಾವತಿ (ಗದ್ದಿಗೆ) | - | - | **19,605.00** | **90,000.00** |
| 25 | ಗದ್ದಿಗೆಯಲ್ಲಿ ಉದ್ಯಾನವನ ಅಭಿವೃದ್ಧಿ/ನಿರ್ವಹಣೆ, ಹೆಚ್ಚುವರಿ ಕಾಮಗಾರಿ, ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ ಮತ್ತು ಇತರೆ ವೆಚ್ಚ | 6,32,964.00 | 6,24,095.00 | **7,32,532.00** | **25,00,000.00** |
| 26 | ಕೆರೆ ಅಭಿವೃದ್ಧಿ ಪಡಿಸಲು ಆಗುವ ವೆಚ್ಚ | - | - | **-** | **20,00,000.00** |
| 27 | ಕೆರೆ ಅಭಿವೃದ್ಧಿ ಶುಲ್ಕ ಇಂಡಿಯನ್ ಬ್ಯಾಂಕ್‌ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು | - | - | **31,12,000.00** | **-** |
| 28 | ಇತರೆ ವೆಚ್ಚ | 60.00 | 444.00 | **60.00** | **2,000.00** |
| | **ಒಟ್ಟು** | **30,64,447.00** | **20,92,809.00** | **46,14,799.00** | **76,47,000.00** |

**ಘೋಷ್ವಾರೆ:**

| **2015–16ನೇ ಸಾಲಿನ ಅಂದಾಜು ಆಯವ್ಯಯ ಘೋಷ್ವಾರೆ** | | | |
|---|---|---|---|
| 1. | 2015–16ನೇ ಸಾಲಿನ ಆರಂಭಿಕ ಶಿಲ್ಕು | ರೂ. | 1,63,67,727.00 |
| 2. | 2015–16ನೇ ಸಾಲಿನ ಅಂದಾಜು ಜಮೆ | ರೂ. | 1,04,57,000.00 |
| 3. | 2015–16ನೇ ಸಾಲಿನ ಅಂದಾಜು ಒಟ್ಟು ಜಮೆ | ರೂ. | 2,68,24,727.00 |
| 4. | 2015–16ನೇ ಸಾಲಿನ ಅಂದಾಜು ಖರ್ಚು | ರೂ. | 76,47,000.00 |
| 5. | 2015–16ನೇ ಸಾಲಿನ ಅಂದಾಜು ಅಖೈರು ಶಿಲ್ಕು | ರೂ. | 1,91,77,727.00 |
| 6. | 2015–16ನೇ ಸಾಲಿನಲ್ಲಿ ಅಂದಾಜು ಹೂಡಿಕೆ ಮೊಬಲಗು. | ರೂ. | 94,73,148.00 |
| 7. | ಒಟ್ಟು | **ರೂ.** | **2,86,50,875.00** |

ಈ ಮೇಲಿನ ಅಂದಾಜು ಆಯವ್ಯಯ (ಬಡ್ಜೆಟ್ ಮಂಡನೆ) ಯನ್ನು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** ಮಂಡಿಸಿರುವ 2015–16ನೇ ಸಾಲಿನ ಅಂದಾಜು ಆಯವ್ಯಯದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಸದರಿ ಆಯವ್ಯಯಕ್ಕೆ ಸಭೆಯು ಸರ್ವಾನುಮತದ ಆಡಳಿತಾತ್ಮಕ ಅಂಗೀಕಾರ ನೀಡಿ ಸಕ್ಷಮ ಪ್ರಾಧಿಕಾರದಿಂದ (ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ) ಮಂಜೂರಾತಿ ಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

**4)ವಿಷಯಸಂಖ್ಯೆ4 : ಪ್ರಾಧಿಕಾರದ ಅಧ್ಯಕ್ಷರಿಗೆ ಒಬ್ಬರು ಪಿ.ಎ. (personal assistant) ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸಭಾ ಅಂಗೀಕಾರಕ್ಕಾಗಿ.**

**ಟಿಪ್ಪಣಿ:** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದ ಆದೇಶ ಪತ್ರ ಸಂಖ್ಯೆ:ನಅಇ/65/ಬೆಂರೂಪ್ರಾ/2015, ದಿನಾಂಕ:28.02.2015ರ ಅಧಿಸೂಚನೆ ಆದೇಶದನ್ವಯ ದಿನಾಂಕ:02.03.2015ರಂದು ಪ್ರಾಧಿಕಾರದ ಅಧ್ಯಕ್ಷರಾಗಿ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು ಅಧಿಕಾರ ವಹಿಸಿಕೊಂಡಿರುತ್ತಾರೆ. ಇವರ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಒಬ್ಬರು ಪಿ.ಎ. **(personal assistant)**ರವರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರವನ್ನು ಕೋರಲು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಡಿ.ಪಿ.ಎ.ಆರ್ (ಬಿ.ಪಿ.ಇ)23/ಎಸ್.ಪಿ.ಯು/92, ದಿನಾಂಕ:11.05.1994ರಲ್ಲಿ ಆದೇಶಿಸಿರುವಂತೆ ಪ್ರಾಧಿಕಾರದ ಅಧ್ಯಕರಿಗೆ ಪಿ.ಎ. (personal assistant)ರವರನ್ನು ಹಾಲಿ ಪ್ರಾಧಿಕಾರದಲ್ಲಿ ಇರುವ ಸಿಬ್ಬಂದಿಯವರಲ್ಲಿ ಯಾರನ್ನಾದರೂ ಅಥವಾ ಸಿಬ್ಬಂದಿಯವರ ಅಲಭ್ಯತೆ ಇದ್ದಲ್ಲಿ ಮಾನ್ಯ ಅಧ್ಯಕ್ಷರ ಆಯ್ಕೆಯಂತೆ ಇತರ ಯಾವುದಾದರೂ ಕಂಪೆನಿ/ಬೋರ್ಡ್/ಆರ್ಗನೈಜೇಶನ್ ಅಥವಾ ಸರ್ಕಾರಿ ಕಚೇರಿಗಳಿಂದ ಅಧ್ಯಕ್ಷರ ಅಧಿಕಾರಾವಧಿಯವರೆಗೆ ಮಾತ್ರ ನಿಯೋಜಿಸಿಕೊಂಡು ನೇಮಕಾತಿ ಮಡಿಕೊಳ್ಳಬಹುದೆಂದು ತಿಳಿಸಿರುವಂತೆ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5)ವಿಷಯ ಸಂಖ್ಯೆ 5 : ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಅಂದಾಜು 5.00ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿರುವ ಉದ್ಯಾನವನಕ್ಕೆ ಹೆಚ್ಚುವರಿಯಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವ ಬಗ್ಗೆ ಈಗಾಗಲೇ ಆಗಿರುವ ಭಾಗಶಃ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಾದ ಶ್ರೀ ಸದಾಶಿವ ರೈ, ಮಂಜುಶ್ರೀ ಕನ್‌ಸ್ಟ್ರಕ್ಷನ್‌ರವರಿಗೆ ಪ್ರಥಮ ಮತ್ತು ದ್ವಿತೀಯ ಹಂತವಾಗಿ ಪಾವತಿಸಿರುವ ರೂ.4,90,131/– ಮತ್ತು 7,50,000/– ಒಟ್ಟು ರೂ. 12,40,131/–ಮಾತ್ರಕ್ಕೆ ಸಭಾ ಘಟನೋತ್ತರ ಮಂಜೂರಾತಿಗಾಗಿ ಮಂಡಿಸಿದೆ.**

**ಟಿಪ್ಪಣಿ:** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಿ ನಿರ್ಮಿಸಿರುವ ಗದ್ದಿಗೆ ಉದ್ಯಾನವನಕ್ಕೆ ಹೆಚ್ಚುವರಿಯಾಗಿ ತುಂತುರು/ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿ, ಹೆಚ್ಚಿನ ಅಲಂಕಾರಿಕ ಮತ್ತು ಹೂವಿನ ಗಿಡಗಳನ್ನು ಹಾಕಿ ಉದ್ಯಾನವನದ ಆಕರ್ಷಣೆಗಾಗಿ ಉಯ್ಯಾಲೆ, ಜಾರುಬಂಡಿ ಇನ್ನಿತರೆ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಲು ಹಾಗೂ ಉದ್ಯಾನವನದಲ್ಲಿ ಕಾವಲುಗಾರರ ಕೊಠಡಿ, ಶೌಚಾಲಯ, ಉಪಹಾರ ಮಂದಿರ ಇವುಗಳನ್ನು ಅಳವಡಿಸಲು ಅಂದಾಜು 26.40ಲಕ್ಷ ವೆಚ್ಚಕ್ಕೆ ಸೂಪರಿಟೆಂಡಿಂಗ್ ಇಂಜಿನಿಯರ್ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವೃತ್ತ ಮಂಗಳೂರುರವರು ತಾಂತ್ರಿಕ ಅನುಮೋದನೆಯನ್ನು ಹಾಗೂ ಸರ್ಕಾರದ ಪತ್ರ ಸಂಖ್ಯೆ:ನಅಇ/103/ಮೈಅಪ್ರಾ/2014, ದಿನಾಂಕ:21.05.2014ರ ಪತ್ರದಲ್ಲಿ ರೂ.26.40ಲಕ್ಷ ವೆಚ್ಚದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ ಹಾಗೂ ಅತ್ಯಂತ ಕಡಿಮೆ ದರಪಟ್ಟಿಯನ್ನು ನಮೂದಿಸಿರುವ ಗುತ್ತಿಗೆದಾರರಾದ ಶ್ರೀ ಸದಾಶಿವ ರೈರವರಿಗೆ ಹೆಚ್ಚುವರಿ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಅದರಂತೆ ಸದರಿಯವರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಭಾಗಶಃ ಆಗಿರುವ ಕೆಲಸಗಳಿಗೆ ರೂ.4,90,131/–ಗಳನ್ನು ಪಾವತಿಸಲು ನಗರಸಭಾ ತಾಂತ್ರಿಕ ವಿಭಾಗದಿಂದ ಎಂ.ಬಿ.ಪುಸ್ತಕದಲ್ಲಿ ದಾಖಲಿಸಿ ಅನುಮೋದನೆ ನೀಡಿರುವಂತೆ ಪಾವತಿಸಲು ಕೋರಿರುವ ಪ್ರಸ್ತಾವನೆಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುಮೋದನೆ ಪಡೆದುಕೊಂಡು ಗುತ್ತಿಗೆದಾರರಾದ ಶ್ರೀ ಸದಾಶಿವ ರೈರವರಿಗೆ ಪ್ರಥಮ ಹಂತವಾಗಿ ರೂ.4,60,723/–ಮಾತ್ರವನ್ನು ಕಾವೇರಿ ಗ್ರಾಮೀಣ ಬ್ಯಾಂಕ್ ಚೆಕ್ ಸಂಖ್ಯೆ:035000/08.01.2015ರಲ್ಲಿ ನೀಡಿ

ಒಟ್ಟು ಮೊತ್ತದಿಂದ ಕಡಿತಗೊಳಿಸಿರುವ ಸೇಲ್ಸ್ ಟ್ಯಾಕ್ಸ್ ರೂ.19,605/- ಮತ್ತು ಟಿ.ಡಿ.ಎಸ್. ರೂ.9,803/-ಗಳನ್ನು ಆಯಾ ಲೆಕ್ಕ ಶಿರ್ಷಿಕೆಗೆ ಜಮೆ ಮಾಡಲಾಗಿರುತ್ತದೆ ಹಾಗೂ ದ್ವಿತೀಯ ಹಂತವಾಗಿ ರೂ.10,31,189/-ಮಾತ್ರವನ್ನು ಪಾವತಿಸಲು ನಗರಸಭಾ ತಾಂತ್ರಿಕ ವಿಭಾಗದಿಂದ ಎಂ.ಬಿ.ಪುಸ್ತಕದಲ್ಲಿ ದಾಖಲಿಸಿ ಅನುಮೋದನೆನ್ನು ನೀಡಿರುವಂತೆ ಪಾವತಿಸಲು ಗುತ್ತಿಗೆದಾರರಾದ ಶ್ರೀ ಸದಾಶಿವ ರೈರವರು ಕೋರಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು ಮತ್ತು ಆಯುಕ್ತರು ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿಯಾಗಿ ಅಭಿವೃದ್ಧಿ ಪಡಿಸಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಗುತ್ತಿಗೆದಾರರು ಕೋರಿರುವ ರೂ. 10,31,189/-ರಲ್ಲಿ ಭಾಗಶಃ ರೂ.7,50,000/- ಮಾತ್ರವನ್ನು ಕಾನೂನಿನಡಿಯಲ್ಲಿ ನಿಯಮಗಳನ್ನು ಪಾಲಿಸಿ ಪಾವತಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಆದೇಶಿಸಿರುವಂತೆ, ಗುತ್ತಿಗೆದಾರರಿಂದ ಕಾರ್ಮಿಕ ಕಲ್ಯಾಣ ನಿಧಿಗೆ ಶೇ.1, ಸೇಲ್ಸ್ ಟ್ಯಾಕ್ಸ್ ಶೇ.4, ಟಿ.ಡಿ.ಎಸ್. ಶೇ.2, ರಾಜಧನ ಕಡಿತ ಹೀಗೆ ಒಟ್ಟು ರೂ. 1,99,007/- ಮಾತ್ರವನ್ನು ಕಡಿತಗೊಳಿಸಿ, ನಗದು ರೂ.5,50,993/-ಮಾತ್ರವನ್ನು ಗುತ್ತಿಗೆದಾರರಾದ ಶ್ರೀ ಸದಾಶಿವ ರೈ ರವರಿಗೆ ಕಾವೇರಿ ಗ್ರಾಮೀಣ ಬ್ಯಾಂಕ್ ಚೆಕ್ ಸಂಖ್ಯೆ:733878/22.05.2015ರಲ್ಲಿ ಪಾವತಿಸಲಾಗಿರುತ್ತದೆ. ಪ್ರಸ್ತಾವನೆಯನ್ನು ಘಟನೋತ್ತರ ಮಂಜೂರಾತಿಗಾಗಿ ಸಭೆಯಲ್ಲಿ ಮಂಡಿಸಿದೆ.

<u>**ನಿರ್ಣಯ:-**</u> ಗದ್ದಿಗೆಯಲ್ಲಿ ನಿರ್ಮಿಸುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿರುವ ಬಗ್ಗೆ ಮಾಹಿತಿಯನ್ನು ಬಯಸಿದರು. ಇದಕ್ಕೆ ಪ್ರಾಧಿಕಾರದ ಅಧ್ಯಕ್ಷರು ಉತ್ತರಿಸುತ್ತಾ ಪ್ರಾಧಿಕಾರದ ಆಯುಕ್ತರೊಡನೆ ಜಂಟಿಯಾಗಿ ಸ್ಥಳ ಪರಿಶೀಲಿಸಿದಲ್ಲೊ ತುಂತುರು/ಹನಿ ನಿರಾವರಿ ಕಾಮಗಾರಿಯು ಸಮಂಜಸವಾಗಿರುವುದಿಲ್ಲ ಎಂದು ಕಂಡುಬಂದ ಕಾರಣ ಗುತ್ತಿಗೆದಾರರು ಪಾವತಿಸಲು ಕೋರಿರುವ ರೂ.10,31,189/-ರಲ್ಲಿ ಭಾಗಶಃ 7.50ಲಕ್ಷ ಹಣವನ್ನು ಪಾವತಿಸಲು ಕ್ರಮ ಕೈಗೊಳ್ಳಲು ಆಯುಕ್ತರಿಗೆ ತಿಳಿಸಲಾಗಿರುತ್ತದೆ ಎಂದು ಸಭೆಯಲ್ಲಿ ಮಾಹಿತಿಯನ್ನು ನೀಡಿದರು.

ಅದರಂತೆ ಗುತ್ತಿಗೆದಾರರಗೆ ಭಾಗಶಃ ಹಣವನ್ನು ಪಾವತಿಸಲಾಗಿದೆ ಎಂದು ಆಯುಕ್ತರು ಸಭೆಯಲ್ಲಿ ತಿಳಿಸಿದರು. ಮುಂದಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಸ್ಟಾಂಡರ್ಡ್ ಕಂಪೆನಿಗಳ ಸಾಮಾಗ್ರಿಗಳನ್ನು ಅಳವಡಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡುವಂತೆ ಮಾನ್ಯ ಶಾಸಕರು ಸಭೆಯಲ್ಲಿ ತಿಳಿಸಿರುವುದನ್ನು ನಗರಸಭಾ ಆಯುಕ್ತರು ಪುಷ್ಟೀಕರಿಸಿದರು. ಅದರಂತೆ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿ ಈಗಾಗಲೇ ಗುತ್ತಿಗೆದಾರರಿಗೆ ಪಾವತಿಸಿರುವ ಒಟ್ಟು ಮೊತ್ತ ರೂ. 12,40,131/-ಮಾತ್ರಕ್ಕೆ ಸಭೆಯು ಸರ್ವಾನುಮತದ ಘಟನೋತ್ತರ ಮಂಜೂರಾತಿ ನೀಡಿತು.

<u>**6)ವಿಷಯ ಸಂಖ್ಯೆ 6: ಕೆರೆ ಅಭಿವೃದ್ಧಿ/ದುರಸ್ಥಿ ಪಡಿಸಲು ಪ್ರಾಧಿಕಾರದ ನಿಧಿಯಲ್ಲಿರುವ ಕೆರೆ ಅಭಿವೃದ್ಧಿ ಶುಲ್ಕದಿಂದ ರೂ.10.00ಲಕ್ಷವನ್ನು ನಗರಸಭೆಗೆ ಹಸ್ತಾಂತರಿಸಲು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.**</u>

<u>**ಟಿಪ್ಪಣಿ:-**</u>ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿ ವಿನ್ಯಾಸವನ್ನು ಅನುಮೋದಿಸುವಾಗ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ :ಸಂ.ವ್ಯಾ.ಶಾ.ಇ/41/ಶಾಸನ/2011/ಬೆಂಗಳೂರು, ದಿನಾಂಕ:03.01.2012ರ ವಿಶೇಷ ಪತ್ರಿಕೆಯಲ್ಲಿ ನಿಗಧಿತ ಶುಲ್ಕದೊಂದಿಗೆ ಕೆರೆ ಅಭಿವೃದ್ಧಿ ಶುಲ್ಕ ಎಕರೆಯೊಂದಕ್ಕೆ 1.00ಲಕ್ಷದಂತೆ ಪಾವತಿಸಿಕೊಂಡು ಈ ಹಣವನ್ನು ಕೆರೆಯನ್ನು ಪುನಶ್ಚೇತನಗೊಳಿಸಲು ಉಪಯೋಗಿಸಬೇಕಾಗಿರುತ್ತದೆ. ಆದ್ದರಿಂದ ಪ್ರಾಧಿಕಾರದಿಂದ ಪಾವತಿಸಿಕೊಂಡಿರುವ ಕೆರೆ ಅಭಿವೃದ್ಧಿ ಶುಲ್ಕದಿಂದ ಮಡಿಕೇರಿ ನಗರದ ನಗರಸಭಾ ವ್ಯಾಪ್ತಿಯಲ್ಲಿ ಬರುವ ರೋಷನಾರ ಕೆರೆಯನ್ನು/ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಇತರೆ ಯಾವುದೇ ಕೆರೆಯನ್ನು ಅಭಿವೃದ್ಧಿ/ದುರಸ್ಥಿ ಪಡಿಸಲು ದಿನಾಂಕ:17.01.2013ರ ಪ್ರಾಧಿಕಾರದ ಸಭಾ ವಿಷಯಸಂಖ್ಯೆ 7ರಲ್ಲಿ ಕಾಯ್ದಿರಿಸಿರುವ ರೂ.10.00ಲಕ್ಷವನ್ನು ನಗರಸಭೆಗೆ ಹಸ್ತಾಂತರಿಸಲು ಸರ್ಕಾರದ ಅನುಮೋದನೆಯನ್ನು ಕೋರಲು ಸಭಾ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>**ನಿರ್ಣಯ:-**</u>ನಗರಾಭಿವೃದ್ಧಿ ಪ್ರಾಧಿಕಾರವು ಪಾವತಿಸಿಕೊಂಡಿರುವ ಕೆರೆ ಅಭಿವೃದ್ಧಿ ಶುಲ್ಕದಲ್ಲಿ ರೂ.10.00ಲಕ್ಷವನ್ನು ನಗರಸಭೆಗೆ ಹಸ್ತಾಂತರಿಸುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ಪ್ರಾಧಿಕಾರದಿಂದ ರೋಷನಾರ ಕೆರೆಯನ್ನು ದುರಸ್ಥಿ ಪಡಿಸುವ ಸಸುವಾಗಿ ಆಗುವ ಅಂದಾಜು ವೆಚ್ಚದ ದರಪಟ್ಟಿಯನ್ನು ನಗರಸಭೆಯಿಂದ ಕೋರಲಾಗಿರುತ್ತದೆ ಎಂದು ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ತಿಳಿಸಿದರು ಇದಕ್ಕೆ ಉತ್ತರವಾಗಿ ನಗರಸಭೆಯ ಆಯುಕ್ತರು ಅಂದಾಜು ದರಪಟ್ಟಿಯನ್ನು ಸಿದ್ದಪಡಿಸಲು

ಕ್ಯಾಡ್ ಝೋನ್, ಮೈಸೂರವರಿಗೆ ಕೋರಲಾಗಿದ್ದು, ಸದರಿ ಸಂಸ್ಥೆಯವರು ಸ್ಥಳ ಪರಿಶೀಲನೆ ನಡೆಸಿರುತ್ತಾರೆ ಹಾಗೂ ಸದ್ಯದಲ್ಲೇ ನೀಡುವ ಅಂದಾಜು ಪಟ್ಟಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು. ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**7)ವಿಷಯ ಸಂಖ್ಯೆ 7 : ನಗರಸಭಾ ವ್ಯಾಪ್ತಿಯ ಮಾರುಕಟ್ಟೆಯ ಬಳಿಯಿರುವ ಹಳೆಯ ಕಸಾಯಿಖಾನೆ ಉನ್ನತೀಕರಿಸುವ ಸಂಬಂಧ ಕೈಗಾರಿಕಾ ಉದ್ದೇಶಕ್ಕೆ ಬಳಸಲು ಅನುಮತಿ ನೀಡುವ ಬಗ್ಗೆ.**

**ಟಿಪ್ಪಣಿ:** ಮಡಿಕೇರಿ ನಗರಸಭಾ ವ್ಯಾಪ್ತಿಯ ಮಾರುಕಟ್ಟೆಯ ಬಳಿಯಿರುವ ಹಳೆಯ ಕಸಾಯಿಖಾನೆ (Slaughter house) ಘಟಕವು ಮಹಾಯೋಜನೆಯ ಪರಿಷ್ಕೃತ-1 (ಅಂತಿಮ)-2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ವಾಣಿಜ್ಯ ವಲಯದಲ್ಲಿ ಕಸಾಯಿ ಖಾನೆ ನಿರ್ಮಿಸಲು ವಲಯ ನಿಯಾಮಾವಳಿಯಲ್ಲಿ ವಿಶೇಷ ಸಂದರ್ಭದಲ್ಲಿ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಸಲಹೆ, ಸೂಚನೆ/ಆಕ್ಷೇಪಣೆಗಳನ್ನು ಆಹ್ವಾನಿಸಿ, ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮತಿ ನೀಡಲು ಅವಕಾಶವಿರುತ್ತದೆ.

ಅದರಂತೆ ನಗರಸಭೆಯಿಂದ ದಿನಾಂಕ:13.01.2015ರಂದು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆಯನ್ನು ನೀಡಿ ಯಾವುದೇ ಸಲಹೆ ಸೂಚನೆ/ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು ತಿಳಿಸಿ ಪತ್ರ ಸಲ್ಲಿಸಿರುತ್ತಾರೆ. ಆದ್ದರಿಂದ ನಗರಸಭಾ ವ್ಯಾಪ್ತಿಯ ಮಾರುಕಟ್ಟೆಯ ಬಳಿಯಿರುವ ಹಳೆಯ ಕಸಾಯಿಖಾನೆ ಘಟಕವನ್ನು ನಿರ್ಮಿಸಲು ತಾಂತ್ರಿಕ ಅಭಿಪ್ರಾಯವನ್ನು ನೀಡಬಹುದಾಗಿರುತ್ತದೆ. ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-**ವಾಣಿಜ್ಯ ವಲಯದಲ್ಲಿ ಕಸಾಯಿಖಾನೆ ನಿರ್ಮಿಸಲು ವಲಯನಿಯಾಮಾವಳಿಯಲ್ಲಿ ಅವಕಾಶವಿರುವುದರಿಂದ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ನೀಡಲು ಕ್ರಮ ಕೈಗೊಳ್ಳಬಹುದೆಂದು ಪ್ರಾಧಿಕಾರದ ಆಯುಕ್ತರಿಗೆ ತಿಳಿಸಿ, ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**8)ವಿಷಯಸಂಖ್ಯೆ 8: ಮಾನ್ಯ ಉಚ್ಚ ನ್ಯಾಯಾಲಯದ ವಕೀಲರಾದ ಶ್ರೀ ಆರ್.ನಾಗೇಂದ್ರ ನಾಯಕ್ ರವರಿಗೆ ವಕೀಲರ ಶುಲ್ಕ ಪಾವತಿಸುವ ಬಗ್ಗೆ.**

**ಟಿಪ್ಪಣಿ:** ಶ್ರೀ ಹೆಚ್.ಎಂ.ನಂದಕುಮಾರ್‌ರವರು ಮಡಿಕೇರಿ ನಗರಸಭಾ ಬ್ಲಾಕ್ ನಂಬರ 18, ಸರ್ವೆ ನಂಬರ್ 512/113ರಲ್ಲಿನ 0.03 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ಕಟ್ಟಡ ನಿರ್ಮಿಸಲು ಈ ಕಚೇರಿಯಿಂದ ತಾಂತ್ರಿಕ ಅಭಿಪ್ರಾಯ ಪಡೆದುಕೊಂಡು ಕಟ್ಟಡ ನಿರ್ಮಿಸುವಾಗ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸಿರುವ ಬಾಬ್ತು ಶ್ರೀ ಮಾದೇಟಿರ ತಿಮ್ಮಯ್ಯನವರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ದಾವೆ ಹೂಡಿದ್ದು, ಪ್ರಾಧಿಕಾರವನ್ನು ಪ್ರತಿವಾದಿಯನ್ನಾಗಿ ಮಾಡಿರುತ್ತಾರೆ. ಪ್ರಾಧಿಕಾರದ ಪರವಾಗಿ ಶ್ರೀ ಆರ್.ನಾಗೇಂದ್ರ ನಾಯಕ್, ಮಾನ್ಯ ಉಚ್ಚ ನ್ಯಾಯಾಲಯದ ವಕೀಲರು, ಬೆಂಗಳೂರು ಇವರಿಗೆ ಶ್ರೀ ನಂದಕುಮಾರ್‌ರವರ ಕಡತಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ, ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ಪತ್ರ ನೀಡಲಾಗಿರುತ್ತದೆ. ಇದು ಅತ್ಯಂತ ತುರ್ತು ವಿಷವಾಗಿದ್ದ ಕಾರಣ ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ವಕೀಲರನ್ನು ನೇಮಕಾತಿ ಮಾಡಿಕೊಂಡಿಲ್ಲದ ಕಾರಣ ಸದರಿಯವರ ಮೂಲಕ ನ್ಯಾಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದ್ದರಿಂದ ಉಚ್ಚ ನ್ಯಾಯಾಲಯದ ವಕೀಲರಾದ ಶ್ರೀ ಆರ್.ನಾಗೇಂದ್ರ ನಾಯಕ್ ರವರನ್ನು ಪ್ರಾಧಿಕಾರದ ವಕೀಲರನ್ನಾಗಿ ನೇಮಕಾತಿ ಮಾಡಿಕೊಂಡಿರುವುದನ್ನು ಅನುಮೋದಿಸುವಂತೆಯೂ ಹಾಗೂ ಸದ್ರಿ ಕಡತಕ್ಕೆ ಸಂಬಂಧಿಸಿದಂತೆ ವಕೀಲರ ಶುಲ್ಕ ರೂ.15,000/-ವನ್ನು ಪಾವತಿಸಲು ಕೋರಿ ಸಲ್ಲಿಸಿರುವ ಬಿಲ್ಲನ್ನು ಪಾವತಿಸಲು ಹಾಗೂ ನಂತರದಲ್ಲಿ ಶ್ರೀ ಕೆ.ಎ.ಮೂಸಾ ಮತ್ತು ಇತರರು ಹಾಗೂ ಶ್ರೀ ಕೆ.ಎಂ.ಮೊಣ್ಣಪ್ಪ ಮತ್ತು ಇತರರು ವಿರುದ್ಧ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ ರಿಟ್ ಪಿಟಿಷನ್ ಸಂಖ್ಯೆ: 9822-9826/2015 ಎಲ್‌ಬಿ-(ಆರ್.ಇ.ಎಸ್) ಮತ್ತು ರಿಟ್ ಪಿಟಿಷನ್ ಸಂಖ್ಯೆ 16617-16624 ಎಲ್.ಬಿ-(ಆರ್.ಇ.ಎಸ್)ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ಮಹದೇವಪೇಟೆ ರಸ್ತೆ ವಿಸ್ತರಣೆ ಬಗ್ಗೆ ದಾವೆ ಹೂಡಿದ್ದು, ಈ ಎರಡು ದಾವೆಗಳಿಗೂ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಪ್ರಾಧಿಕಾರದ ಪರವಾಗಿ ಹಾಜರಾಗಲು

ವಕೀಲರಾದ ಶ್ರೀ ನಾಗೇಂದ್ರ ನಾಯಕ್‌ರವರನ್ನು ಕೋರಲಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಲು ಶ್ರೀ ನಾಗೇಂದ್ರ ನಾಯಕ್, ವಕೀಲರು, ಬೆಂಗಳೂರುರವರನ್ನು ನೇಮಕಾತಿ ಮಾಡಿಕೊಳ್ಳಲು ಪ್ರಸಾವನೆಯನ್ನು ಪ್ರಾಧಿಕಾರದ ಸಭಾ ಅನುಮೋದನೆಗಾಗಿ ಸಲ್ಲಿಸಲಾಗಿದೆ

**ನಿರ್ಣಯ:** ಪ್ರಾಧಿಕಾರದ ವಕೀಲರನ್ನಾಗಿ ಶ್ರೀ ಆರ್.ನಾಗೇಂದ್ರ ನಾಯಕ್, ಬೆಂಗಳೂರುರವರನ್ನು ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ ವಕಾಲತ್ತು ವಹಿಸಲು ನೇಮಕಾತಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿ, ವಕೀಲರ ಶುಲ್ಕವನ್ನು ಪಾವತಿಸಲು ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು ಹಾಗೂ ಮಡಿಕೇರಿ ನಗರದ ಮಹದೇವಪೇಟೆ ರಸ್ತೆ ಅಗಲೀಕರಣ ಕಾಮಗಾರಿಯನ್ನು ಮಳೆಗಾಲ ಮುಗಿದ ನಂತರದಲ್ಲಿ ಪ್ರಾರಂಭಿಸಲಾಗುವುದೆಂದು ಅಲ್ಲಿಯವರೆಗೆ ನ್ಯಾಯಾಲಯದಲ್ಲಿರುವ ಸ್ಟೇ ಆರ್ಡರ್‌ನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಪ್ರಾಧಿಕಾರದ ಅಧ್ಯಕ್ಷರು ಮತ್ತು ಆಯುಕ್ತರು ಸಭೆಯಲ್ಲಿ ತಿಳಿಸಿದರು.

**9 ವಿಷಯಸಂಖ್ಯೆ 9: ಕೆರೆ ಅಭಿವೃದ್ಧಿ ಶುಲ್ಕವಾಗಿ ಪಾವತಿಸಿಕೊಂಡರುವ ಒಟ್ಟು ಮೊಬಲಗು ರೂ. 70.00ಲಕ್ಷದಲ್ಲಿ 40.00ಲಕ್ಷ ಹಣವನ್ನು 1 ವರ್ಷದ ಅವಧಿಯವರೆಗೆ ಠೇವಣಿ ಇಡುವ ಬಗ್ಗೆ ಪ್ರಾಧಿಕಾರದ ಅನುಮೋದನೆಗಾಗಿ ಮಂಡಿಸಲಾಗಿದೆ.**

**ಟಿಪ್ಪಣಿ:** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿ ವಿನ್ಯಾಸವನ್ನು ಅನುಮೋದಿಸುವಾಗ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ :ಸಂ.ವ್ಯಾ.ಶಾ.ಇ/41/ಶಾಸನ/2011/ಬೆಂಗಳೂರು, ದಿನಾಂಕ:03.01.2012ರ ವಿಶೇಷ ಪತ್ರಿಕೆಯಲ್ಲಿ ನಿಗಧಿತ ಶುಲ್ಕದೊಂದಿಗೆ ಕೆರೆ ಅಭಿವೃದ್ಧಿ ಶುಲ್ಕ ಎಕರೆಯೊಂದಕ್ಕೆ 1ಲಕ್ಷದಂತೆ ಪಾವತಿಸಿಕೊಂಡು ಈ ಹಣವನ್ನು ಕೆರೆಯನ್ನು ಪುನಶ್ಚೇತನಗೊಳಿಸಲು ಉಪಯೋಗಿಸಬೇಕಾಗಿರುತ್ತದೆ. ಅದರಂತೆ 2015ನೇ ಮಾರ್ಚ್ ಅಂತ್ಯಕ್ಕೆ ಪ್ರಾಧಿಕಾರದ ನಿಧಿಯಲ್ಲಿ ಕೆರೆ ಅಭಿವೃದ್ಧಿ ಶುಲ್ಕ ಒಟ್ಟು ರೂ. 70.00ಲಕ್ಷ ಇದ್ದು ಇದರಲ್ಲಿ ರೂ.40.00ಲಕ್ಷ ಹಣವನ್ನು ಅತೀ ಹೆಚ್ಚು ಬಡ್ಡಿ ಕೊಡುವ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಠೇವಣಿ ಇಡಲು ಕ್ರಮ ಕೈಗೊಳ್ಳಲು ಸಭಾ ಅಂಗೀಕಾರದೊಂದಿಗೆ ಸರ್ಕಾರವನ್ನು ಕೋರಲು ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**ನಿರ್ಣಯ:** ಅತೀ ಹೆಚ್ಚು ಬಡ್ಡಿ ನೀಡುವ ಬ್ಯಾಂಕುಗಳಲ್ಲಿ ಸದ್ಯದಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕು ಅತೀ ಹೆಚ್ಚು ಬಡ್ಡಿ ನೀಡಿರುವುದರಿಂದ ಸರ್ಕಾರದ ಅನುಮೋದನೆಯೊಂದಿಗೆ ಠೇವಣಿ ಇಡಲು ಕ್ರಮ ಕೈಗೊಳ್ಳಬಹುದೆಂದು ಸಭೆಯು ತೀರ್ಮಾನಿಸಿ ಸರ್ವಾನುಮತದ ಅಂಗೀಕಾರ ನೀಡಿತು.

## 10) ವಿಷಯ ಸಂಖ್ಯೆ 10 :- ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ 1961ರ ಕಲಂ 18ರಡಿ ಸಂಗ್ರಹಿಸಲಾದ ಶುಲ್ಕದಲ್ಲಿ ಶೇ.5ರ ಭಾಗದ ಮೊತ್ತವನ್ನು ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ವರ್ಗಾಯಿಸಲು ಸಭಾ ಅನುಮೋದನೆ ಪಡದುಕೊಳ್ಳುವ ಬಗ್ಗೆ.

**ನಿರ್ಣಯ:-** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು 2014-15ನೇ ಸಾಲಿನಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 18ರಡಿ ಸಂಗ್ರಹಿಸಿರುವ ಒಟ್ಟು ಮೊಬಲಗು ರೂ.22,44,892/- ಮಾತ್ರದ ಶೇ.5ರ ಭಾಗ ಅಂದರೆ ಒಟ್ಟು ರೂ.1,22,446/-ಮಾತ್ರವನ್ನು ಸದಸ್ಯ ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರುರವರು ಪಾವತಿಸಲು ದಿನಾಂಕ:12.03.2015ರಂದು ಕೋರಿರುವಂತೆ 2014-15ನೇ ಸಾಲಿಗೆ ಸಂಗ್ರಹಿಸಲಾದ ಒಟ್ಟು ಶುಲ್ಕ ರೂ.22,44,892/-ರ ಶೇ.5 ರೂ.1,22,446/- ಮಾತ್ರವನ್ನು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರುರವರಿಗೆ ಡಿ.ಡಿ. ಮೂಲಕ ಪಾವತಿಸಲು ಕ್ರಮ ಕೈಗೊಳ್ಳವಂತೆ ಆಯುಕ್ತರಿಗೆ ತಿಳಿಸಿ, ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

2. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಕಂಪ್ಯೂಟರಿನ ಮೋನಿಟರ್ ದುರಸ್ಥಿಯಾಗಿರುವುದರಿಂದ ಹೊಸ ಮೋನಿಟರ್ ಖರೀದಿಸಲು ಸಭೆಯ ಅಂಗೀಕಾರಕ್ಕಾಗಿ ಮಂಡಿಸಿದೆ.

**ನಿರ್ಣಯ:-**ಕಚೇರಿಗೆ ಅವಶ್ಯವಿರುವ ಕಂಪ್ಯೂಟರ್ ಮೋನಿಟರ್ ಖರೀದಿಸಲು/ದುರಸ್ಥಿ ಮಾಡಿಸಿಕೊಳ್ಳಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

3. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ತಾಂತ್ರಿಕ ಅನುಮೋದನೆ ನೀಡಿರುವ ಶ್ರೀ ಬಿ.ಎನ್.ಪ್ರಕಾಶ್‌ರವರ ವಿನ್ಯಾಸ ನಕ್ಷೆಯಲ್ಲಿ ಉದ್ಯಾನವನ, ಬಯಲುಪ್ರದೇಶ ಮತ್ತು ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ಮಾರಾಟ ಮಾಡಿರುವ ಬಗ್ಗೆ.

**ನಿರ್ಣಯ:–** ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು ಪ್ರಾಧಿಕಾರದಿಂದ ಅನುಮೋದಿಸಿರುವ ಶ್ರೀ ಬಿ.ಎನ್.ಪ್ರಕಾಶ್‌ರವರ ವಿನ್ಯಾಸ ನಕ್ಷೆಯಲ್ಲಿ ಕಾಯ್ದಿರಿಸಿರುವ ಉದ್ಯಾನವನ ಬಯಲುಪ್ರದೇಶ ಮತ್ತು ಸಿ.ಎ.ನಿವೇಶನಗಳಲ್ಲಿನ ಕೆಲವು ಭಾಗಶಃ ಜಾಗವನ್ನು ಶ್ರೀ ಚುಂಡಯ್ಯ ಮತ್ತು ಇನ್ನಿತರ ಕೆಲವು ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಆಕ್ಷೇಪಿಸುತ್ತಾ, ಪ್ರಾಧಿಕಾರದಿಂದ ಅನುಮೋದನೆಗೊಂಡ ವಿನ್ಯಾಸ ನಕ್ಷೆಗಳನ್ನು ಉದ್ಯಾನವನ, ಬಯಲುಜಾಗ ಮತ್ತು ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿದ ಜಮೀನುಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ನಗರಸಭೆಯವರು ಜಂಟಿಯಾಗಿ ಸ್ಥಳ ಪರಿಶೀಲಿಸಿ, ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿನ ಉದ್ಯಾನವನ, ಬಯಲುಜಾಗ ಮತ್ತು ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿದ ಎಲ್ಲಾ ನಿವೇಶನಗಳನ್ನು ಭೂ ಸ್ವಾಧೀನಪಡಿಸಿಕೊಂಡಿರುವುದು ಅಥವಾ ಹಸ್ತಾಂತರಿಸಿಕೊಂಡಿರುವುದನ್ನು ಕಾತರಿ ಪಡಿಸಿಕೊಳ್ಳುವುದು ಹಸ್ತಾಂತರಿಸಿಕೊಂಡಿಲ್ಲದ ಪಕ್ಷದಲ್ಲಿ ಕ್ರಮ ಕೈಗೊಳ್ಳುವುದು ಸೂಕ್ತವೆಂದು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಇದಕ್ಕೆ ಆಯುಕ್ತರು ಮತ್ತು ನಗರಸಭಾ ಆಯುಕ್ತರು ಸಹ ಸಹಮತ ವ್ಯಕ್ತಪಡಿಸಿದರು. ಅನುಮೋದನೆಯಾಗಿರುವ ಎಲ್ಲಾ ಖಾಸಗಿ ವಿನ್ಯಾಸಗಳನ್ನು ಭೌಗೋಳಿಕವಾಗಿ ನಗರಸಭಾ ಅಧ್ಯಕ್ಷರು, ಆಯುಕ್ತರು ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರುರವರುಗಳು ಜಂಟಿಯಾಗಿ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ವಿಧಾನಸಭಾ ಸದ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು ಸಲಹೆಯಿತ್ತರು. ಇದನ್ನು ಒಪ್ಪಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಸಹಿ/–**

**(ಶ್ರೀಮತಿ ಸುರಯ್ಯಾ ಅಬ್ರಾರ್)**
**ಅಧ್ಯಕ್ಷರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**

**(ಶ್ರೀ ಬಿ.ಪಿ.ರಾಜಶೇಖರ್)**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**